**ಸಾಕ್ಷಿದಾರರನ್ನು ದಿನಾಂಕಃ 14.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ JSR ರವರಿಂದಃ**

ಪ್ರತಿವಾದಿಯು ನಮಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ರಸ್ತೆಯಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ನಾನು ದಾವೆ ಮಾಡಿರುತ್ತೇನೆ. ನನ್ನ ಮಾವ ಪುಟ್ಟೇಗೌಡ, ವೆಂಕಟಮ್ಮ ಎಂಬುವವರಿಂದ 1965 ರಲ್ಲಿ 22 ½ x 22 ½ ಅಡಿ ಇದ್ದ ಹಂಚಿನ ಮನೆಯನ್ನು ಖರೀದಿ ಮಾಡಿದ್ದರು. ಸದರಿ ಮನೆಯನ್ನು ಹೊಡೆದು ಹಾಕಿ 15 x 22 ಅಡಿಗೆ ಆರ್.ಸಿ.ಸಿ ಕಟ್ಟಡ ಕಟ್ಟಿರುತ್ತೇವೆ. ಇನ್ನುಳಿದ ಆಸ್ತಿ ನನ್ನ ಮಾವನ ಹೆಸರಿನಲ್ಲಿ ಉಳಿದಿದೆ. ಉಳಿಕೆ ಜಾಗ ತಮ್ಮ ಮಾವನ ಹೆಸರಿನಲ್ಲಿ ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ನಿಪಿ-3 ದಾಖಲೆಯ ಪ್ರಕಾರ 22 x 15 ಅಡಿ ಜಾಗ ನನ್ನ ಮಾವ ಪುಟ್ಟೇಗೌಡ ಬಿನ್ ತಿಮ್ಮೇಗೌಡರವರಿಂದ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದ ಉಳಿಕೆ ಜಾಗ ನನ್ನ ಮಾವನ ಹೆಸರಿಗೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಾವನ ಹೆಸರಿಗೆ 22 ½ x 22 ½ ಅಡಿ ಆಸ್ತಿ ಇರಲಿಲ್ಲ ಬದಲಾಗಿ 22 x15 ಅಡಿ ಜಾಗ ಮಾತ್ರ ಇತ್ತು ಎಂದರೆ ಸರಿಯಲ್ಲ. 22 ½ x 22 ½ ಆಸ್ತಿ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ನಾನು ಹಾಜರು ಮಾಡಿರುವ ನಿಪಿ-1 ದಾಖಲೆಯಲ್ಲಿ ಎ ಷೆಡ್ಯೂಲ್ ಆಸ್ತಿಯ ಉತ್ತರಕ್ಕೆ ಕೆಂಪೇಗೌಡರವರ ಖಾಲಿ ಜಾಗ ಇದೆ ಎಂದು ನಮೂದು ಇದೆ ಎಂದು ತೋರಿಸಿ ಕೇಳಲಾಗಿ ಸಾಕ್ಷಿಯು ನೋಡಿ ಓದಿ ಹೌದು ಎನ್ನುತ್ತಾರೆ**.

ನನ್ನ ಮಾವ 22 ½ x 22 ½ ಅಡಿ ಆಸ್ತಿಯನ್ನು ಖರೀದಿ ಮಾಡಿಲ್ಲ. ಬದಲಾಗಿ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಎ ಷೆಡ್ಯೂಲ್ ಆಸ್ತಿಯ ಉತ್ತರ ಭಾಗಕ್ಕೆ ಕೆಂಪೇಗೌಡರವರಿಗೆ ಸೇರಿದ ಖಾಲಿ ಜಾಗ ಎಂದು ಇದ್ದರೂ ದಾವಾ ಷೆಡ್ಯೂಲಿಗೆ ಸುಳ್ಳು ಚೆಕ್ಕುಬಂಧಿ ಹಾಕಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಪಾಲುಪಾರಿಕತ್ ಮೂಲಕ ಬಂದಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ದಾವಾ ಆಸ್ತಿಯು ಪಾಲು ಪಾರಿಕತ್

ಮೂಲಕ ತಮ್ಮ ಗಂಡನ  ಹೆಸರಿಗೆ ಬಂದಿದ್ದು ತಮ್ಮ ಹೆಸರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ಸೀನಪ್ಪ ಎಂದರೆ ಸರಿ . ದಾವಾ ಆಸ್ತಿಯು ತಮ್ಮ ಗಂಡ ರವರು ಒಬ್ಬರಿಗೆ ಮಾತ್ರ ಸೇರಿದ್ದಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ನಿಪಿ-2 ರ ಪ್ರಕಾರ 14x20 ಅಡಿ ಆಸ್ತಿ ಮಾತ್ರ ಸೇರಬೇಕು ಎಂದು ಇದೆ ಎಂದರೆ ಸಾಕ್ಷಿಯು ಮನೆ ಅಷ್ಟರಲ್ಲಿ ಇದೆ ಎಂದು ನುಡಿಯುತ್ತಾರೆ. ತಮ್ಮ ಮಾವನ ಹೆಸರಿಗೆ 22 ½ x 22 ½ ಅಡಿ ಆಸ್ತಿ ಇತ್ತು ಎಂದು ಹೇಳಿದ್ದು 14x 20 ಅಡಿಯಲ್ಲಿ ಮನೆ ಇರುತ್ತದೆ ಎಂದು ಹೇಳಿದ್ದು ಇನ್ನುಳಿದ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು ಖಾಲಿ ಜಾಗ ನಾವೇ ಬಳಸುತ್ತಿದ್ದೇವೆ ಎಂದು ನುಡಿಯುತ್ತಾರೆ.

ಮೂಲ ದಾಖಲೆಗಳ ಪ್ರಕಾರ ಮಾತ್ರ ನನ್ನ ಗಂಡ ಸೀನಪ್ಪರವರಿಗೆ 14 x20 ಅಡಿ ವಿಸ್ತೀರ್ಣದ ಆಸ್ತಿ ಸೇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಇನ್ನುಳಿದ ಜಾಗ ನನ್ನ ಮಾವನ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಉಳಿಕೆ ಜಾಗ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ .

ಷೆಡ್ಯೂಲ್ ಬಿ ಆಸ್ತಿಯಲ್ಲಿ 12 x 60 ಅಡಿ ವಿಸ್ತೀರ್ಣದ ರಸ್ತೆ ಇರುತ್ತದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ರಸ್ತೆ ಇರುವ ಬಗ್ಗೆ ಪಟ್ಟಣ ಪಂಚಾಯಿತಿಯಲ್ಲಿ ನಕ್ಷೆ ತಯಾರಿಸಿ ದಾಖಲೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ . ರಸ್ತೆ ಇರುವ ಬಗ್ಗೆ ತೋರಿಸಲು ನಕ್ಷೆಯನ್ನೇನಾದರೂ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಮ್ಮ ಮನೆಯ ಉತ್ತರ ಭಾಗಕ್ಕೆ ರಸ್ತೆ ಇಲ್ಲದೇ ಇದ್ದರೂ ರಸ್ತೆ ಇದೆ  ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-2 ಫೋಟೋದಲ್ಲಿ ಕಾಣುವ ತಳಪಾಯವನ್ನು ಯಾರು ಹಾಕಿರುತ್ತಾರೆ  ಎಂದು ಕೇಳಲಾಗಿ ಸಾಕ್ಷಿಯು 1 ನೇ ಪ್ರತಿವಾದಿ ಲೋಕೇಶ ಎಂದು ನುಡಿಯುತ್ತಾರೆ. ಅಸೆಸ್ ಮೆಂಟ್ ನಂ.519 ರಲ್ಲಿ 11 ½ x 16 ½ ಅಡಿ ನಿವೇಶನ ಕೆಂಪೇಗೌಡರವರಿಗೆ ಸೇರಿದ್ದು ಎಂದರೆ ಸರಿ . ಸದರಿ ಕೆಂಪೇಗೌಡ 1 ನೇ ಪ್ರತಿವಾದಿಯ ಕುಟುಂಬದವರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ತಳಪಾಯ ಹಾಕುತ್ತಿರುವ ಆಸ್ತಿಯ ಅಸೆಸ್ ಮೆಂಟ್ ನಂ.521 ವಿಸ್ತೀರ್ಣ 24x15 ಅದರ ಚೆಕ್ಕುಬಂಧಿ ಪೂರ್ವಕ್ಕೆ ಮರಿಮಲ್ಲಯ್ಯರವರ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಕೆಂಪೇಗೌಡರವರಿಗೆ ಸೇರಿದ ಖಾಲಿ ಜಾಗ ಮತ್ತು ದಕ್ಷಿಣಕ್ಕೆ ಮರಿ ಮಲ್ಲೇಗೌಡರವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯ ಅಜ್ಜ ಖರೀದಿ ಮಾಡಿದ್ದು, ಆ ಆಸ್ತಿಯಲ್ಲಿ 1 ನೇ ಪ್ರತಿವಾದಿ ತಳಪಾಯ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಮತ್ತು 1 ನೇ ಪ್ರತಿವಾದಿ ಹಾಕಿರುವ ತಳಪಾಯ ಮತ್ತು ಕೆಂಪೇಗೌಡರವರ ಆಸ್ತಿಯ ನಡುವೆ ತಿರುಗಾಡಲು ಯಾವುದೇ ಗಲ್ಲಿ ಜಾಗ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆ ನೆರೆಹಾವಳಿಯಿಂದ ಬಿದ್ದು ಹೋಗಿದ್ದರಿಂದ ಸರಗೂರು ಪಟ್ಟಣ ಪಂಚಾಯಿತಿ ವತಿಯಿಂದ ರಾಜೀವ್ ಗಾಂಧಿ ವಸತಿ ನಿಗಮ ಯೋಜನೆಯಡಿ ಮನೆ ನಿರ್ಮಿಸಲು ಪರವಾನಗಿ ಪಡೆದು ತಳಪಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚೆನ್ನಾಗಿರುವ ಮನೆಯನ್ನು ಹೊಡೆದು ಬೇರೆ ಮನೆ ಕಟ್ಟುತ್ತಿದ್ದಾರೆ ಎಂದು ನುಡಿಯುತ್ತಾರೆ .

ಷೆಡ್ಯೂಲ್ ಬಿ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲ ಮತ್ತು ಪೂರ್ವ ಭಾಗಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇಲ್ಲ</u>**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**